ಮೂಲ ದಾವೆ ನಂ.100/2021

ಪಿ.ಡಬ್ಲ್ಯೂ.01

ದಿನಾಂಕಃ 23-09-2024.
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
<u>ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದ ಃ</u>

ನನ್ನ ಮದುವೆ 5-6 ವರ್ಷಗಳ ಹಿಂದೆ ವಡಗೇರಾ ಗ್ರಾಮದಲ್ಲಿ ಆಗಿರುತ್ತದೆ. ನನ್ನ ತವರು ಮನೆ ವಡಗೇರಾ ತಾಲೂಕೀನ ಬಿಳಾರ್ ಗ್ರಾಮ ಇರುತ್ತದೆ. ದಾವಾ ಆಸ್ತಿಗಳ ಸರ್ವೆ ನಂಬರಗಳ ನನಗೆ ನೆನಪಿಲ್ಲ. ಅವುಗಳ ವಿಸ್ತೀರ್ಣವೂ ಸಹ ನನಗೆ ಗೊತ್ತಿಲ್ಲ. ನಾವು ಒಟ್ಟು ನಾಲ್ಕು ಜಮೀನು ಮತ್ತ ಎರಡು ಮನೆಗಳಿಗೆ ಸಂಬಂದಿಸಿದಂತೆ ದಾವೆ ಸಲ್ಲಿಸಿರುತ್ತೇವೆ. ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ದಾಖಲೆಗಳನ್ನು ನಾನು ನೋಡಿರುತ್ತೇವೆ ಮತ್ತು ಅವುಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ದಾವಾ ಮನೆ ಆಸ್ತಿಗಳು ಯಾರ ಪಾಲಿಗೆ ಬಂದಿರುತ್ತದೆ ಎಂದು ನನಗೆ ನೆನಪಿಲ್ಲ. ಮನೆ ನಂಬರ 7-94 ರ ಇದು ನನ್ನ ಗಂಡನ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಮನೆ ನಂಬರ 7-95/4 ಇದು 5 ನೇ ಪ್ರತಿವಾದಿ ಲಕ್ಷ್ಮೀ ಇವರ ಗಂಡ ಭೀಮರಾಯ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಸದರಿ ಭೀಮರಾಯ ಇತನು ನನ್ನ ಮದುವೆಯ ನಂತರ ಮರಣ ಹೊಂದಿರುತ್ತಾನೆ. ಸದರಿ ಭೀಮರಾಯ ಇತನ ಹೆಂಡತಿ ಮತ್ತು ಮಕ್ಕಳು ವಡಗೇರಾದಲ್ಲಿ ವಾಸವಾಗಿರುತ್ತಾರೆ. ದಾವಾ ಜಮೀನುಗಳ ಸರ್ವೆ ನಂಬರ ನನಗೆ ನೆನಪಿಲ್ಲ. ದಾವಾ ಆಸ್ತಿ ಸ.ನಂ. 50/10 ಹಾಗೂ 421 ಇವುಗಳು ನಮ್ಮ ಹಿರಿಯರ ಆಸ್ತಿಗಳು ಎಂದರೆಸ ರಿ. ದಾವಾ ಆಸ್ತಿ ಸ.ನಂ. 495/3 ಇದು ಖರೀದಿ ಮಾಡಿದ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿಯು ಎಲ್ಲರೂ ಕೂಡಿ ಇದ್ದಾಗಲೇ ನಮ್ಮ ಅತ್ತೆ ಖರೀದಿಸಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಜಮೀನು 2015 ನೇ ಇಸವಿಯಲ್ಲಿ ಯುಗಾದಿ ಹಬ್ಬದ ದಿನ ಖರೀದಿಸಲಾಗಿದೆ ಎಂದರೆ ಸಾಕ್ಷಿಯು ಖರೀದಿ ಮಾಡಿದ ದಿನ ಗೊತ್ತಿಲ್ಲ ಆದರೆ ಅದನ್ನು ನನ್ನ ಅತ್ತೆ ಖರೀದಿಸಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಜಮೀನನ್ನು ನನ್ನ ಅತ್ತೆ ನೆಪ ಮಾತ್ರಕೆ ನನ್ನ ಗಂಡನ ಹೆಸರಿನಲ್ಲಿ ಖರೀದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಸ.ನಂ. 421 ರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಅದರಲ್ಲಿ ನನ್ನ ಗಂಡನ ಪಾಲಿಗೆ ಎಷ್ಟು ಜಮೀನು ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡನ ಅಣ್ಣನ ಪಾಲಿಗೆ ಎಷ್ಟು ಎಕರೆ ಜಮೀನು ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ನನ್ನ ಗಂಡ ಮತ್ತು ನನ್ನ ಗಂಡನ ಅಣ್ಣನ ಪಾಲಿಗೆ ತಲಾ 1 ಎಕರೇ 7 ಗುಂಟೆ ಜಮೀನು ಬಂದಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂಬರಿನ ಜಮೀನಿನ ಮಧ್ಯ ಭಾಗದಲ್ಲಿನ ಜಮೀನು ನನ್ನ ಗಂಡನ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ದಾವಾ ಆಸ್ತಿ ಸ.ನಂ. 50/10 ರಲ್ಲಿ 1 ಎಕರೆ 3 ಗುಂಟೆ ಜಮೀನು 5 ನೇ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ ಎಂದರೆ ಸರಿ.

2. 4 ನೇ ಪ್ರತಿವಾದಿ ಯಲ್ಲಮ್ಮ ನನ್ನ ಗಂಡನ ಅಕ್ಕನಾಗಿರುತ್ತಾರೆ. 4 ನೇ ಪ್ರತಿವಾದಿ ಯಲ್ಲಮ್ಮ ಇವರು ರೂ.50,000/- ಪಡೆದುಕೂಂಡು ದಾವಾ ಆಸ್ತಿಯಲ್ಲಿನ ತನ್ನ ಪಾಲನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರಸ ರಿ. ಅವರು ತಮ್ಮ ಪಾಲನ್ನು ನನ್ನ ಗಂಡ, 5 ನೇ ಪ್ರತಿವಾದಿ ಮತ್ತು 1 ನೇ ಪ್ರತಿವಾದಿ ಇವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. ದಾವಾ ಅಸ್ತಿ ಸ.ನಂ. 495/3 ರಲ್ಲಿ 1 ಎಕರೆ 30 ಗುಂಟೆ ಜಮೀನು ನನ್ನ ಗಂಡನ ಪಾಲಿಗೆ ಬಂದಿರುವುದನ್ನು ನನ್ನ ಗಂಡ 12 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ನನ್ನ ಗಂಡ 12 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದು ಗೊತ್ತಿದ್ದರೂ ಸಹ ಗೊತ್ತಿರುವುದಿಲ್ಲ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾದಂ. ಶಹಾಪೂರ.